# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ357/2014

| **ಚಾಸಾ ಃ** | **14** | **ಪ್ರಾಸಾಃ-** | **6** |
|---|---|---|---|

| | |
|---|---|
| ಹೆಸರು | ಹನುಮಯ್ಯ ಪಿ ಎನ್ |
| ತಂದೆಯ ಹೆಸರು | ಲೇಟ್ ಮುನಿಯಪ್ಪ |
| ವಯಸ್ಸು | 63 |
| ಉದ್ಯೋಗ | ನಿವೃತ್ತ ಜೀವನ |
| ವಿಳಾಸ | ಹಾರೋಹಳ್ಳಿ |

- - - - - - - - - - - - - - - - - - - - - - - - - - - - - -

**ದಿಃ03.07.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು 2012 ರಿಂದ 2014 ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.26.08.2013 ರಂದು ಮಧ್ಯಾಹ್ನ 2:40 ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಟೈಪ್ ಮಾಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ನ ನಂ.364/2013 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರಿಗೆ ನೀಡಿರುತ್ತೇನೆ.

ನಿಪಿ-1 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ), ಪ್ರ.ವ.ವರದಿಯನ್ನು ನಿಪಿ-14, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ಎಸ್.ಆರ್.ಟಿ (ವಿಎಸ್ಆರ್) ಆರೋಪಿತರ ಪರ ವಕೀಲರಿಂದಃ-</u>**

ದಿ.21.8.2013 ರಂದು ಘಟನೆಯಾಗಿರುತ್ತದೆ ಎಂದರೆ ಸರಿ. ದಿ.26.08.2013 ರಂದು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿ. 5 ದಿನಗಳ ವಿಳಂಬ ಇದೆ ಎಂದರೆ ಸರಿ. ಆರೋಪಿತರ ಮತ್ತು ಚಾಸಾ-1 ರವರ ನಡುವೆ ಸಿವಿಲ್ ಪ್ರಕರಣಗಳು ದಾಖಲಿರುವುದು ನನಗೆ ಗೊತ್ತಿರುವುದಿಲ್ಲ, ನಾನು ಕೇವಲ ಪ್ರಕರಣ ದಾಖಲಿಸಿರುತ್ತೇನೆಂದು ನುಡಿಯುತ್ತಾರೆ. ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಮಹಜರ್ ಮಾಡಿರುವುದಿಲ್ಲ. ಚಾಸಾ-1 ರವರು ನೀಡಿರುವ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದೂರು ದಾಖಲಿಸುವ ಸಂದರ್ಭದಲ್ಲಿ ಪಿರ್ಯಾದಿದಾರರ ಅದಾರ್ ಕಾರ್ಡ್ ನ್ನು ಪಡೆದುಕೊಂಡಿರುವುದಿಲ್ಲ. ಮೇಲಾಧಿಕಾರಿಗಳ ಮಾತುಕೇಳಿ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**